# ಕರ್ನಾಟಕ ಸರ್ಕಾರ

# ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
# 2019–20ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

## ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ,
## ಬೆಂಗಳೂರು

# ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಆಡಳಿತ ವ್ಯವಸ್ಥೆ



ಕರ್ನಾಟಕ ಸರ್ಕಾರ

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ 2019-20ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

### 1. ಪೀಠಿಕೆ:

ರಾಜ್ಯದಲ್ಲಿನ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಒಂದು ಪ್ರಧಾನ ಇಲಾಖೆಯಾಗಿರುತ್ತದೆ. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯವು ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೆಚ್ಚುವರಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರುಗಳು ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿಯವರು ನಗರ ಯೋಜನಾ ನಿರ್ದೇಶಕರ ಕಾರ್ಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವರು.

ರಾಜ್ಯದಲ್ಲಿ ಬೆಂಗಳೂರು ವಿಭಾಗ, ಬೆಂಗಳೂರು ಮೈಸೂರು ವಿಭಾಗ, ಮೈಸೂರು ಬೆಳಗಾಂ ವಿಭಾಗ, ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗ, ಗುಲ್ಬರ್ಗಾದಲ್ಲಿ 4 ಕಂದಾಯ ವಿಭಾಗಗಳಿರುತ್ತವೆ. ಅದರನ್ವಯ ಇಲಾಖೆಯು ಸಹ ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾದಲ್ಲಿ ವಿಭಾಗೀಯ ಕಛೇರಿಗಳನ್ನು ಹೊಂದಿದ್ದು, ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಧಾರವಾಡ, ಇವರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಈ ವಿಭಾಗೀಯ ಕಛೇರಿಗಳ ವ್ಯಾಪ್ತಿಯಲ್ಲಿ ಒಟ್ಟಾರೆ ಇಲಾಖೆಯ 30 ಶಾಖಾ ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಶಾಖಾ ಕಛೇರಿಗಳ ಮುಖ್ಯಸ್ಥರು ಗ್ರೂಪ್ 'ಎ' ವೃಂದದ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರಾಗಿರುತ್ತಾರೆ.

### 2. ಇಲಾಖೆಯ ಕಾರ್ಯಚಟುವಟಿಕೆಗಳು :

ರಾಜ್ಯದ ನಗರ/ಪಟ್ಟಣಗಳ ಹಾಗೂ ಗ್ರಾಮಗಳ ಯೋಜಿತ ಬೆಳವಣಿಗೆಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಯಡಿ ಸ್ಥಳೀಯ ಯೋಜನಾ ಪ್ರದೇಶಗಳನ್ನು ಘೋಷಿಸಲು ಪ್ರಸ್ತಾವನೆಗಳನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆದು ಸರ್ಕಾರದಿಂದ ರಚಿಸಲಾದ ಯೋಜನಾ ಪ್ರಾಧಿಕಾರಗಳು ಮಹಾಯೋಜನೆಗಳನ್ನು ಇದೇ ಕಾಯ್ದೆಯಡಿ ತಯಾರಿಸಲು ತಾಂತ್ರಿಕ ನೆರವನ್ನು ನೀಡಿ, ಸದರಿ ಮಹಾಯೋಜನೆಗಳನ್ನು ಪರಿಶೀಲಿಸಿ ಸರ್ಕಾರದ ಅನುಮೋದನೆ ಪಡೆಯುವುದು ಇಲಾಖೆಯ ಪ್ರಮುಖ ಕಾರ್ಯವಾಗಿರುತ್ತದೆ.

### 2.1ಶಾಸನಬದ್ಧ ಕಾರ್ಯಗಳು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ನ್ನು ರಾಜ್ಯದಲ್ಲಿನ **157** ನಗರ/ಪಟ್ಟಣ ಪ್ರದೇಶಗಳಿಗೆ ವಿಸ್ತರಿಸಿ, ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಹಾಗೂ

ಪ್ರಾಧಿಕಾರವನ್ನು ರಚಿಸಲಾಗಿದೆ. ಅದರಂತೆ ಒಟ್ಟಾರೆ ರಾಜ್ಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹೊರತುಪಡಿಸಿ **31** ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು **52** ನಗರ ಯೋಜನಾ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ **74** ಪಟ್ಟಣಗಳಿಗೆ ಸಂಬಂಧಿಸಿದಂತೆ ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳೇ ನಗರ ಯೋಜನಾ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸುತ್ತಿವೆ.

## 3. ಇಲಾಖೆಯ ಪ್ರಮುಖ ಕಾರ್ಯಕ್ರಮ ಮತ್ತು ಸಾಧನೆಗಳು :

### 3.1: ನಗರಾಭಿವೃದ್ಧಿ ಪ್ರಾಧಿಕಾರ, ಯೋಜನಾ ಪ್ರಾಧಿಕಾರ, ನಗರಸಭೆ ಮತ್ತು ಪುರಸಭೆಗಳಿಗೆ ಯೋಜನಾ ವಿಷಯಗಳಲ್ಲಿ ತಾಂತ್ರಿಕ ನೆರವು ನೀಡುವುದು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು 157 ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಈಗಾಗಲೇ ವಿಸ್ತರಿಸಲಾಗಿದ್ದು, ಉಳಿದ ಪಟ್ಟಣ ಪ್ರದೇಶಗಳನ್ನು ಈ ಉದ್ದೇಶಕ್ಕಾಗಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಪ್ರತ್ಯೇಕ ಯೋಜನಾ ಪ್ರಾಧಿಕಾರಗಳನ್ನು ರಚಿಸುವ ಬದಲು ಸಂಬಂಧಿಸಿದ ನಗರಸಭೆ: ಪುರಸಭೆ: ಪಟ್ಟಣ ಪಂಚಾಯಿತಿಗಳನ್ನೇ ಯೋಜನಾ ಪ್ರಾಧಿಕಾರಗಳಾಗಿ ರಚಿಸಲು ಸರ್ಕಾರವು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಮಹಾಯೋಜನೆಗಳನ್ನು ತಯಾರಿಸುವಲ್ಲಿ ಹಾಗೂ ನಕ್ಷೆಯಲ್ಲಿ ಸೂಚಿಸುವ ಪ್ರಸ್ತಾವನೆಗಳನ್ನು ಜಾರಿಗೊಳಿಸುವಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯ ಸಹಕಾರ ನೀಡುತ್ತಿದ್ದು, ಈ ಕ್ರಮವು ಸಂವಿಧಾನದ 74ನೇ ತಿದ್ದುಪಡಿಯ ಉದ್ದೇಶಗಳಿಗೂ ಅನುಗುಣವಾಗಿರುತ್ತದೆ.

### 3.2: ಮಹಾಯೋಜನೆಗಳ ತಯಾರಿಕೆಯಲ್ಲಿ ಶಾಖಾ ಕಛೇರಿಗಳಿಗೆ ತಾಂತ್ರಿಕ ನೆರವು ನೀಡುವುದು:



ಇಲಾಖೆಯು ಯೋಜನಾ ಪ್ರಾಧಿಕಾರಗಳಿಗೆ: ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮಹಾಯೋಜನೆ ತಯಾರಿಸುವಲ್ಲಿ ಮತ್ತು ಜಾರಿಗೆ ತರುವ ಕಾರ್ಯದಲ್ಲಿ ತಾಂತ್ರಿಕ ನೆರವು ನೀಡುವುದನ್ನು ಮುಂದುವರಿಸಿಕೊಂಡು ಬಂದಿದೆ.

2018–19 ನೇ ಸಾಲಿನ ಅವಧಿಯಲ್ಲಿ 08 ನಗರ/ಪಟ್ಟಣಗಳ ಮಹಾಯೋಜನೆಗಳು ಅನುಮೋದನೆಯಾಗಿರುತ್ತದೆ. ಇನ್ನೂ 05 ನಗರ/ಪಟ್ಟಣಗಳ ಮಹಾಯೋಜನೆಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ ಹಾಗೂ ಪ್ರಸ್ತುತ ಬಾಲ್ಕಿ, ಔರಾದ್, ಚಿಟಗುಪ್ಪ ಮತ್ತು ಶಿರಸಿ ನಗರ/ಪಟ್ಟಣಗಳ ಮಹಾಯೋಜನೆಯು ಕೇಂದ್ರ ಕಛೇರಿಯಲ್ಲಿ ಪರಿಶೀಲಿಸಲಾಗಿರುತ್ತದೆ.

## 3.3 ಇಲಾಖೆಯಿಂದ ತತ್ವಾಧಾರಿತ ವಿಷಯಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಕುರಿತು ವಿವರ ಈ ಕೆಳಕಂಡಂತೆ ಇರುತ್ತದೆ.

### 3.3.1:LBPAS ತಂತ್ರಾಂಶ:




Ease of Doing Business ನ ಉಪಕ್ರಮದಲ್ಲಿ ಕಟ್ಟಡ ನಕ್ಷೆ ಅನುಮೋದನೆ, ವಿನ್ಯಾಸ ನಕ್ಷೆ ಅನುಮೋದನೆ ಹಾಗೂ ಭೂ–ಉಪಯೋಗ ಬದಲಾವಣೆಯನ್ನು ಆನ್‌ಲೈನ್ ಮುಖಾಂತರ ನೀಡಲು ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದೆ. LBPAS (Land and Buildign Plan Approval System) ರಲ್ಲಿ Auto Plan ತಂತ್ರಾಂಶವನ್ನು ಉಪಯೋಗಿಸಿಕೊಂಡು ನಕ್ಷೆಗಳನ್ನು ಸ್ವಯಂಚಾಲಿತವಾಗಿ ಪರಿಶೀಲಿಸಿ, ಆನ್‌ಲೈನ್ ಮುಖಾಂತರ ಅನುಮೋದನೆಯನ್ನು ಅಮೃತ್ ಯೋಜನೆಯಡಿ ಆಯ್ಕೆಯಾಗಿರುವ 26 ನಗರ/ಪಟ್ಟಣಗಳಲ್ಲಿ ನೀಡಲಾಗುತ್ತಿದೆ ಹಾಗೂ ಹೆಚ್ಚುವರಿಯಾಗಿ 20 ನಗರ/ಪಟ್ಟಣಗಳಲ್ಲಿ ಆನ್‌ಲೈನ್ ಮುಖಾಂತರ ಕಟ್ಟಡ ಪರವಾನಗಿ ನೀಡಲು ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

ಭೂ–ಉಪಯೋಗ ಬದಲಾವಣೆ ಹಾಗೂ ವಿನ್ಯಾಸ ನಕ್ಷೆಗಳಿಗೆ ಆನ್‌ಲೈನ್ ಮುಖಾಂತರ ಅನುಮೋದನೆ ನೀಡಲು ಮಾಡ್ಯೂಲ್‌ಗಳನ್ನು ತಯಾರಿಸಿದ್ದು, 46 ನಗರ/ಪಟ್ಟಣಗಳಲ್ಲಿ ಅನುಷ್ಠಾನಗೊಳಿಸುವ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ದಿನಾಂಕ:13–06–2019 ರಂದು ಅಧಿಕೃತವಾಗಿ ತಂತ್ರಾಂಶಕ್ಕೆ ಚಾಲನೆ ನೀಡಿರುತ್ತಾರೆ.

### 3.3.2:AMRUT ಯೋಜನೆ:




ಕೇಂದ್ರ ಸರ್ಕಾರದ "AMRUT" ಯೋಜನೆಯಡಿ ರಾಜ್ಯದ 26 ನಗರ/ಪಟ್ಟಣಗಳನ್ನು ಆಯ್ಕೆ ಮಾಡಲಾಗಿದ್ದು, ಸದರಿ 26 ನಗರ/ಪಟ್ಟಣಗಳಿಗೆ GIS ಆಧಾರಿತ ಮೂಲನಕ್ಷೆಯನ್ನು ತಯಾರಿಸಿ ಮಹಾಯೋಜನೆ ತಯಾರಿಕೆ ಸಂಬಂಧ ವಿವಿಧ ಹಂತಗಳ ಕಾರ್ಯಗಳು ಪ್ರಗತಿಯಲ್ಲಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ ಯೋಜನೆಗೆ ನೋಡಲ್ ಏಜೆನ್ಸಿ ಆಗಿರುತ್ತದೆ. ಸದರಿ ಯೋಜನೆಯು 3 ವಿಭಾಗಗಳನ್ನು ಒಳಗೊಂಡಿದ್ದು, ಆ ವಿಭಾಗಗಳು ಈ ಕೆಳಕಂಡಂತಿರುತ್ತವೆ:

I. GIS ಆಧಾರಿತ ಮೂಲನಕ್ಷೆಯ ತಯಾರಿಸುವುದು: ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು 26 ಅಮೃತ್ ನಗರ/ಪಟ್ಟಣಗಳಿಗೆ ಮೂಲನಕ್ಷೆಗಳನ್ನು ತಯಾರಿಸುವ ಸಂಬಂಧ KSRSAC ಇವರೊಂದಿಗೆ ಒಪ್ಪಂದದ ಕರಾರು ಮಾಡಿಕೊಂಡಿದ್ದು, ಸದರಿಯವರು ತಮ್ಮಲ್ಲಿ ಲಭ್ಯವಿರುವ ಉಪಗ್ರಹ ಚಿತ್ರಣದನ್ವಯ K-GIS ತಂತ್ರಾಂಶವನ್ನು ಬಳಸಿಕೊಂಡು ಮೂಲನಕ್ಷೆ ತಯಾರಿಸಿರುತ್ತಾರೆ. ಈ ಸಂಬಂಧ ಈಗಾಗಲೇ 9 ನಗರ/ಪಟ್ಟಣಗಳ ಕರಡು ಮೂಲನಕ್ಷೆಯು ಸಿದ್ಧವಾಗಿರುತ್ತದೆ.

II. GIS ಆಧಾರಿತ ಮಹಾಯೋಜನೆ ತಯಾರಿಕೆ: ಈ ಭಾಗವನ್ನು 3 ಹಂತಗಳ 3 ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿರುತ್ತದೆ. ಸದರಿ 3 ಪ್ಯಾಕೇಜ್‌ಗಳು ಈ ಕೆಳಕಂಡಂತಿವೆ:

| | | | |
|---|---|---|---|
| **1ನೇ ಹಂತ** | **ಪ್ಯಾಕೇಜ್–1** | **ಪ್ಯಾಕೇಜ್–2** | **ಪ್ಯಾಕೇಜ್–3** |
| | 1.ಹುಬ್ಬಳ್ಳಿ–ಧಾರವಾಡ | 4. ಮಂಗಳೂರು | 7. ದಾವಣಗೆರೆ–ಹರಿಹರ |
| | 2. ಗದಗ–ಬೆಟಗೇರಿ | 5. ಉಡುಪಿ | 8. ಚಿತ್ರದುರ್ಗ |
| | 3. ಬೆಳಗಾವಿ | 6. ಚಿಕ್ಕಮಗಳೂರು | 9. ರಾಣೆಬೆನ್ನೂರು |
| **2ನೇ ಹಂತ** | **ಪ್ಯಾಕೇಜ್–4** | **ಪ್ಯಾಕೇಜ್–5** | **ಪ್ಯಾಕೇಜ್–6** |
| | 10. ಶಿವಮೊಗ್ಗ | 12. ವಿಜಯಪುರ | 15. ಮಂಡ್ಯ |
| | 11. ಭದ್ರಾವತಿ | 13. ಬಾಗಲಕೋಟೆ | 16. ಮೈಸೂರು |
| | | 14. ಬದಾಮಿ | 17. ಹಾಸನ |
| **3ನೇ ಹಂತ** | **ಪ್ಯಾಕೇಜ್–7** | **ಪ್ಯಾಕೇಜ್–8** | **ಪ್ಯಾಕೇಜ್–9** |
| | 18. ಕೋಲಾರ | 21. ಬಳ್ಳಾರಿ | 24. ಬೀದರ್ |
| | 19. ರಾಬರ್ಟ್‌ಸನ್‌ಪೇಟೆ | 22. ಗಂಗಾವತಿ | 25. ಕಲಬುರಗಿ |
| | 20. ತುಮಕೂರು | 23. ಹೊಸಪೇಟೆ | 26. ರಾಯಚೂರು |

- ಸದರಿ ಮಹಾಯೋಜನೆ ತಯಾರಿಕೆಯ ಮೊದಲನೇ ಹಂತಕ್ಕೆ ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನ ಪೂರ್ಣಗೊಂಡಿರುತ್ತದೆ. ಈ ಕುರಿತು ಪ್ಯಾಕೇಜ್–2 ಮತ್ತು 3 ಕ್ಕೆ ಒಪ್ಪಂದವನ್ನು ನೀಡಲಾಗಿದೆ. ಅಇಖಅ (Consultancy Evaluation Review Committee) ಯ ನಿರ್ಧಾರದ ಪ್ರಕಾರ ಯಾವುದೇ ಬಿಡ್ಡರ್ ಅನ್ನು ಅರ್ಹನಾಗಿರಲಿಲ್ಲವಾದ್ದರಿಂದ ಪ್ಯಾಕೇಜ್–1 ಕ್ಕೆ ಮತ್ತೊಮ್ಮೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.
- 2 ಮತ್ತು 3ನೇ ಹಂತಕ್ಕೆ ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನ ಪೂರ್ಣಗೊಂಡಿರುತ್ತದೆ. CERC (Consultancy Evaluation Review Committee) ಯ ನಿರ್ಧಾರದ ಪ್ರಕಾರ ಪ್ಯಾಕೇಜ್–6, 7 ಮತ್ತು 9 ಕ್ಕೆ ಒಪ್ಪಂದವನ್ನು ನೀಡಲಾಗುತ್ತಿದೆ.
- CERC (Consultancy Evaluation Review Committee) ಯ ನಿರ್ಧಾರದ ಪ್ರಕಾರ ಯಾವುದೇ ಬಿಡ್ಡರರು ಅರ್ಹರಿಲ್ಲದ ಕಾರಣ ಪ್ಯಾಕೇಜೆ–1, 4, 5 ಮತ್ತು 8ಕ್ಕೆ ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ. ದಿನಾಂಕ:05–08–2019 ರಂದು ಪೂರ್ವ ಬಿಡ್ ಸಭೆ ನಡೆದಿದ್ದು, ಬಿಡ್ ಸಲ್ಲಿಸಲು ದಿನಾಂಕ:19–08–2019 ಕೊನೆಯ ದಿನಾಂಕವೆಂದು ನಿಗಧಿಪಡಿಸಲಾಗಿದ್ದು, ದಿನಾಂಕ: 20–08–2019 ರಂದು ಬಿಡ್‌ಗಳನ್ನು ತೆರೆಯಲಾಗುತ್ತದೆ.

III. Capacity Building Programme: ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ 3 ಹಂತಗಳಲ್ಲಿ ತರಬೇತಿ ಪೂರ್ಣಗೊಂಡಿರುತ್ತದೆ.

**ಆರ್ಥಿಕ ಸ್ಥಿತಿ:**

- ಕರ್ನಾಟಕ ರಾಜ್ಯವು ಸಲ್ಲಿಸಿದ SAP (State Action Plan) ಆಧಾರದ ಮೇಲೆ ಭಾರತ ಸರ್ಕಾರದಿಂದ ಬೆಂಗಳೂರು ಸೇರಿದಂತೆ 27 ನಗರ/ಪಟ್ಟಣಗಳಿಗೆ ರೂ.25,01,00,788/–ಗಳು ಮಂಜೂರಾಗಿರುತ್ತದೆ.
- ಮೂಲನಕ್ಷೆ, ಡೇಟಾಬೇಸ್ ರಚನೆ ಮತ್ತು GIS ಆಧಾರಿತ ಮಹಾಯೋಜನೆ ತಯಾರಿಕೆಗಾಗಿ ಮೊದಲ ಕಂತಿನಂತೆ ರೂ.4,88,80,158/–ಗಳು ಬಿಡುಗಡೆಯಾಗಿರುತ್ತದೆ.
- ಟೆಂಡರ್ ಚಟುವಟಿಕೆಗಳು ಹಾಗೂ ಹಣ ಬಳಕೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

3.3.3: Automated Development Rights Transfer System: **ಆನ್‌ಲೈನ್ ತಂತ್ರಾಂಶದ ಮೂಲಕ ನಿರ್ವಹಿಸುವ ಕುರಿತು:**

ಈ ತಂತ್ರಾಂಶವು ಭೂಮಿ/ಕಟ್ಟಡದ ಪರಿಹಾರದ ಹಕ್ಕನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿ/ಕಟ್ಟಡದ ಪ್ರದೇಶವನ್ನು ಮಾಲಿಕರಿಗೆ ನೀಡುವ ಬದಲಾಗಿ Notional Land ನ ಅಭಿವೃದ್ಧಿಯ ಹಕ್ಕನ್ನು ನೀಡುವ ಕುರಿತಾಗಿರುತ್ತದೆ.

- ಸದರಿ ತಂತ್ರಾಂಶವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015 ರ ಕಲಂ 14(ಬಿ) ರಡಿ ಅಭಿವೃದ್ಧಿ ಹಕ್ಕುಗಳನ್ನು ತಂತ್ರಾಂಶದ ಮೂಲಕ ವಿತರಿಸಲು, ವರ್ಗಾಯಿಸಲು ಅಥವಾ ಬಳಸಿಕೊಳ್ಳಲು ಅವಕಾಶ ನೀಡುತ್ತದೆ. ನಿಯಮಾವಳಿಗಳಲ್ಲಿ ಸದರಿ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಹಾಗಾಗಿ, ಸರ್ಕಾರವು ಸ್ವಯಂಚಾಲಿತ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ ವ್ಯವಸ್ಥೆಗೆ ಎಲೆಕ್ಟ್ರಾನಿಕ್, ಮಾರ್ಕೆಟಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ದಿನಾಂಕ:30–05–2017 ರಂದು ಆದೇಶ ಹೊರಡಿಸಿರುತ್ತದೆ.
- ಸದರಿ ತಂತ್ರಾಂಶದ ಅನುಷ್ಠಾನಕ್ಕೆ ಅನುದಾನ ನೀಡಲು KUIDFC ಯನ್ನು ನಿಯೋಜಿಸಲಾಗಿದೆ.
- NeML (NCDEX e Marketing Limited) ಈ ಸಂಸ್ಥೆಯನ್ನು ಸದರಿ ಅಭಿವೃದ್ಧಿ ಹಕ್ಕುಗಳ ವಹಿವಾಟನ್ನು ಆನ್‌ಲೈನ್ ಮುಖಾಂತರ ನಿರ್ವಹಣೆಗಾಗಿ ನಿಯೋಜಿಸಲಾಗಿದೆ.
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು NeML ಸಂಸ್ಥೆಯ ಒಪ್ಪಂದದನ್ವಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ.
- KUIDFC ಹಾಗೂ NeML ನಡುವಿನ ಒಪ್ಪಂದದ ಕರಾರು ಪ್ರಗತಿಯಲ್ಲಿರುತ್ತದೆ.

### 3.3.4: ಸ್ಥಳೀಯ ಸಂಸ್ಥೆಗಳು, ವಸತಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಸರ್ಕಾರಿ/ ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಇತರೆ ಇಲಾಖೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

1. ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಇತರೆ ಅಭಿವೃದ್ಧಿ ಸಂಸ್ಥೆಗಳಿಗೆ ರೂಪರೇಖೆಗಳನ್ನು ಸಿದ್ದಪಡಿಸಲು ತಾಂತ್ರಿಕ ನೆರವು/ ಸಲಹೆಗಳನ್ನು ನೀಡುವುದನ್ನು ಇಲಾಖೆಯು ಮುಂದುವರಿಸಿಕೊಂಡು ಬಂದಿದೆ. ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು, ಪುನರ್ವಸತಿ ಯೋಜನೆಗಳನ್ನು ಮತ್ತು ನಿವೇಶನ ರಹಿತರಿಗೆ ಆಶ್ರಯ ಯೋಜನೆಯಡಿಯಲ್ಲಿ ತಯಾರಿಸುವ ರೂಪರೇಖೆಗಳನ್ನು ಸಿದ್ದಪಡಿಸಿಕೊಡಲಾಗಿದೆ.
2. ವ್ಯವಸಾಯ ಜಮೀನನ್ನು ವ್ಯವಸಾಯೇತರ ಉಪಯೋಗಕ್ಕಾಗಿ ಭೂ ಪರಿವರ್ತಿಸುವ ಪ್ರಕರಣಗಳಲ್ಲಿ ಇಲಾಖೆಯು ತಾಂತ್ರಿಕ ಅಭಿಪ್ರಾಯವನ್ನು ಕಂದಾಯ ಇಲಾಖೆಗೆ ನೀಡುತ್ತಿದ್ದು ಪ್ರಸ್ತುತ ಸಾಲಿನಲ್ಲಿ **1556** ಪ್ರಕರಣಗಳಲ್ಲಿ ಅಭಿಪ್ರಾಯ ನೀಡಲಾಗಿದೆ.

### 3.4 ರೂಪರೇಖಾ ನಕ್ಷೆಗಳು:

ಪ್ರಸ್ತುತ ಸಾಲಿನಲ್ಲಿ **915** ರೂಪರೇಖೆಗಳಿಗೆ ತಾಂತ್ರಿಕ ಅನುಮೋದನೆ ನೀಡಿದ್ದು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ.

### 3.5. ಇಲಾಖೆ ಯೋಜನೆಗಳು (2018–19):

2018–19ನೇ ಸಾಲಿಗೆ ಲೆಕ್ಕಶೀರ್ಷಿಕೆ 2217–05–001–1–01 ರಡಿಯಲ್ಲಿ ರೂ.1892.00 ಲಕ್ಷ ಅನುದಾನವನ್ನು ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳಿಗೆ ವೆಚ್ಚ ಭರಿಸಲು ಸರ್ಕಾರದಿಂದ ಅನುದಾನ ಒದಗಿಸಲಾಗಿತ್ತು. ಅದರಲ್ಲಿ ಮಾರ್ಚ್ 2019ರ ಅಂತ್ಯದವರೆಗೆ ರೂ.1896.17 ಲಕ್ಷ ವೆಚ್ಚ ಭರಿಸಲಾಗಿದ್ದು, (ರೂ.–4.17) ಲಕ್ಷಗಳ ಹೆಚ್ಚುವರಿಯಾಗಿ ಅನುದಾನ ಭರಿಸಲಾಗಿದೆ.

**ಲೆಕ್ಕ ಶೀರ್ಷಿಕೆ:**

1. 2217–05–001–1–01 – ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನ ಭತ್ಯೆ ಹಾಗೂ ಇತರೆ ವೆಚ್ಚಗಳು
2. 4217–60–800–4–02–386 – ಜಿಲ್ಲಾ ಮಟ್ಟದಲ್ಲಿ ಕಚೇರಿ ಕಟ್ಟಡಗಳ ನಿರ್ಮಾಣ–ಡಿ.ಎಂ.ಇ.
3. 2217–05–001–1–11–059 – ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ ಮತ್ತು ಹೊಸ ಹುದ್ದೆಗಳ ಸೃಜನೆ –ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು.

| ಯೋಜನೆ | ಆಯವ್ಯಯ ಅಂದಾಜು 2016–17 | | ಆಯವ್ಯಯ ಅಂದಾಜು 2017–18 | | ಆಯವ್ಯಯ ಅಂದಾಜು 2018–19 | |
|---|---|---|---|---|---|---|
| | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 1 | 2 | 3 | 4 | 5 | 6 | 7 |
| 1. | 1246.00 | | 2004.00 | | 1892.00 | |
| 2. | 100.00 | | 100.00 | – | 100.00 | – |
| 3. | 100.00 | | 100.00 | | 100.00 | – |

ವೆಚ್ಚ (ರೂ. ಲಕ್ಷಗಳಲ್ಲಿ)

| ಯೋಜನೆ | 2016–17 ನೇ ಸಾಲಿನ ವೆಚ್ಚ | | 2017–18ನೇ ಸಾಲಿನ ವೆಚ್ಚ | | 2018–19ನೇ ಸಾಲಿಗೆ ಬಿಡುಗಡೆ ಮಾಡಿರುವ ಅನುದಾನ | 2018–19ನೇ ಸಾಲಿನ ವೆಚ್ಚ | |
|---|---|---|---|---|---|---|---|
| | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | | ಬಂಡವಾಳ | ರಾಜಸ್ವ |
| 1 | 2 | 3 | 4 | 5 | 6 | 7 | 8 |
| 1. | 1111.28 | 96.82 | 2044.81 | 124.40 | 1892.00 | 1896.17 (– 4.17) | 128.01 |
| 2. | 10.27 | | 87.76 | | 100.00 | 28.31 | |
| 3. | 79.99 | | 46.94 | | 100.00 | 0.46 | |

**2016–17:**

1) "ಯೋಜನೆ" ಲೆಕ್ಕ ಶೀರ್ಷಿಕೆ 2217–05–001–1–11–059" ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ ರೂ.10.27 ವೆಚ್ಚ ಭರಿಸಲಾಗಿದ್ದು, ಉಳಿಕೆ ರೂ.89.73 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2) "ಯೋಜನೆ" ಲೆಕ್ಕ ಶೀರ್ಷಿಕೆ 4217–60–800–4–02–386" ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ–ಡಿ.ಎಂ.ಇ. ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.79.99 ಲಕ್ಷ ವೆಚ್ಚ ಭರಿಸಲಾಗಿದ್ದು, ಉಳಿಕೆ ರೂ.20.01 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

**2017–18:**

1) "ಯೋಜನೆ" ಲೆಕ್ಕ ಶೀರ್ಷಿಕೆ 2217–05–001–1–11–059" ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು ರೂ.100.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ರೂ.87.76 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ. 12.24 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2) "ಯೋಜನೆ" ಲೆಕ್ಕ ಶೀರ್ಷಿಕೆ 4217–60–800–4–02–386" ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ–ಡಿ.ಎಂ.ಇ. ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.46.94 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ.53.06 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

**2018–19:**

1) ಲೆಕ್ಕ ಶೀರ್ಷಿಕೆ 2217–05–001–1–11–059" ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ, ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.28.31 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ.71.69 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2) ಲೆಕ್ಕ ಶೀರ್ಷಿಕೆ 4217–60–800–4–02–386" ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ–ಡಿ.ಎಂ.ಇ. ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.0.46ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ.99.54 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

**ಭೌತಿಕ ಸಾಧನೆ:**

| | | |
|---|---|---|
| 2014–15 | 2015–16 | 2016–17 ಮತ್ತು 2017–18ನೇ ಸಾಲಿಗೆ ಎರಡು ಪ್ರಮುಖ ಲೆಕ್ಕ ಪರಿಶೋಧನೆಯಲ್ಲಿನ ವೀಕ್ಷಣೆ (ಪ್ಯಾರ)/ ಪರಿವೀಕ್ಷಣೆಯ ದಿನಾಂಕ ಮತ್ತು ವರದಿಯ ಉಲ್ಲೇಖ ಸಂಖ್ಯೆಯನ್ನು ನಮೂದಿಸಿ) ಲೆಕ್ಕ ಪರಿಶೋಧನೆ/ ಪರಿವೀಕ್ಷಣೆಯು ಆಗದಿದ್ದಲ್ಲಿ ನಮೂದಿಸಿ |
| – | – | ದಿನಾಂಕ:11-06-2018 ರಿಂದ 18-06-2018 ರವರೆಗೆ ಮತ್ತು ದಿ:26-07-2018 ರಿಂದ 02-08-2018 ರವರೆಗೆ ಲೆಕ್ಕ ಪರಿಶೋಧನೆಯ ವರದಿಯಲ್ಲಿ 14 ಆಕ್ಷೇಪಣೆಗಳು ಇರುತ್ತದೆ. |

Pending

**3.6(2019–20) ನೇ ಸಾಲಿನ ಅನುದಾನ :-**

2019–20ನೇ ಸಾಲಿನ ಲೆಕ್ಕ ಶೀರ್ಷಿಕೆ 2217–05–001–1–01 ರಡಿಯಲ್ಲಿ ರೂ.2223.00 ಲಕ್ಷ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿದೆ.

- ಲೆಕ್ಕ ಶೀರ್ಷಿಕೆ 2217–05–001–1–11–059 ರಡಿಯಲ್ಲಿ ರೂ.100.00 ಲಕ್ಷ ಹಾಗೂ 4217–60–800–4–02–386 ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿದೆ.

**3.6 ಎ) ನಗರ ನಕ್ಷೆ ಕೋಶ:**

ದಿನಾಂಕ 31.12.2016 ರವರೆಗೂ ನಗರ ನಕ್ಷೆ ಕೋಶವು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿದ್ದು, ಸದ್ಯಕ್ಕೆ, ಸರ್ಕಾರದ ಆದೇಶ ಸಂಖ್ಯೆ ನಅಇ 14 ಟಿ.ಎಂಎಸ್, 2017, ಬೆಂಗಳೂರು, ದಿನಾಂಕ 14.3.2017 ರನ್ವಯ ದಿನಾಂಕ 1.1.2017 ರಿಂದ ಪೌರಾಡಳಿತ ನಿರ್ದೇಶನಾಲಯದ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಈ ಇಲಾಖೆಯಿಂದ, ಕೆ.ಎಂ.ಆರ್.ಪಿ ಹಾಗೂ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿಯಲ್ಲಿ, ನಗರ ನಕ್ಷೆ ಕೋಶದ ಮೇಲ್ವಿಚಾರಣೆಯಲ್ಲಿ, ಹೊರಗುತ್ತಿಗೆ ಮೂಲಕ ಕೈಗೊಳ್ಳಲಾಗಿದ್ದ ಮೂಲನಕ್ಷೆ ತಯಾರಿಕಾ ಕಾರ್ಯಗಳು 31.12.2016 ರೊಳಗೆ ಮುಕ್ತಾಯಗೊಂಡಿರುತ್ತವೆ. ಈ ಯೋಜನೆಯಡಿ ತಯಾರಿಸಲಾದ ನಕ್ಷೆಗಳನ್ನು ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯದಿಂದ ಕ್ಲಿಯರೆನ್ಸ್ ಪಡೆದು, ಸಂಬಂದಿಸಿದ ಯೋಜನಾ/ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಹಸ್ತಾಂತರಿಸಲಾಗಿದೆ.

**3.6(ಬಿ) ಇಲಾಖೆಯ ಆಡಳಿತ (ಯೋಜನೇತರ):**

**ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಂಕ್ಷಿಪ್ತ ವರದಿ:**

**ಕಾರ್ಯಕ್ರಮದ ವಿವರ:**

ರಾಜ್ಯದಲ್ಲಿನ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಒಂದು ಪ್ರಧಾನ ಇಲಾಖೆಯಾಗಿರುತ್ತದೆ. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯವು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಚ್ಚುವರಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರುಗಳು ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿಯವರು ನಗರ ಯೋಜನಾ ನಿರ್ದೇಶಕರ ಕಾರ್ಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವರು.

ರಾಜ್ಯದಲ್ಲಿ ಬೆಂಗಳೂರು ವಿಭಾಗ, ಬೆಂಗಳೂರು ಮೈಸೂರು ವಿಭಾಗ, ಮೈಸೂರು ಬೆಳಗಾಂ ವಿಭಾಗ, ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗ, ಗುಲ್ಬರ್ಗಾದಲ್ಲಿ 4 ಕಂದಾಯ ವಿಭಾಗಗಳಿರುತ್ತವೆ. ಅದರನ್ವಯ ಇಲಾಖೆಯು ಸಹ ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾದಲ್ಲಿ ವಿಭಾಗೀಯ ಕಛೇರಿಗಳನ್ನು ಹೊಂದಿದ್ದು, ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಧಾರವಾಡ ಇವರ ಮೇಲ್ವಿಚಾರಣೆಯಲ್ಲಿ ಕಾರ್ಯ-ನಿರ್ವಹಿಸಲಾಗುತ್ತಿದೆ.

ಈ ವಿಭಾಗೀಯ ಕಛೇರಿಗಳ ವ್ಯಾಪ್ತಿಯಲ್ಲಿ ಒಟ್ಟಾರೆ, ಇಲಾಖೆಯ 30 ಶಾಖಾ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಈ ಶಾಖಾ ಕಛೇರಿಗಳ ಮುಖ್ಯಸ್ಥರು ಗ್ರೂಪ್ 'ಎ' ವೃಂದದ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರಾಗಿರುತ್ತಾರೆ.

ಭಾರತ ಸಂವಿಧಾನದ 74ನೇ ತಿದ್ದುಪಡಿಯನ್ವಯ ರಾಜ್ಯದಲ್ಲಿ ಇರುವ 214 (2011 ರ ಜನಗಣತಿಯನ್ವಯ) ನಗರ / ಪಟ್ಟಣಗಳಿಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ನ್ನು ವಿಸ್ತರಿಸಬೇಕಾಗಿದೆ. ವೈಜ್ಞಾನಿಕವಾಗಿ ತಯಾರಿಸಲ್ಪಟ್ಟ ಮೂಲ ನಕ್ಷೆಗಳು ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಲ್ಲಿ ಮತ್ತು ಕಾರ್ಯಗತಗೊಳಿಸುವಲ್ಲಿ ಸ್ಥಳೀಯ ಸಂಸ್ಥೆಗಳ ವಾರ್ಷಿಕ ಯೋಜನೆಗಳು ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಜಿಲ್ಲೆ ಯೋಜನೆಯನ್ವಯ ತಯಾರಿಸಬೇಕಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಜಾರಿಗೊಳಿಸಲಾದ UDPFI ನಿಯಮಾವಳಿಯನ್ವಯ ಸಂಸ್ಥೆಗಳಲ್ಲಿ ಕನಿಷ್ಠ ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿಗಳ ಅವಶ್ಯಕತೆಯನ್ನು ವಿವರಿಸಲಾಗಿದೆ. ಈ ನಿಯಮಾವಳಿಯನ್ನು ಗಣನೆಗೆ ತೆಗೆದುಕೊಂಡು ಇಲಾಖೆಯಲ್ಲಿ ಮತ್ತು ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಹುದ್ದೆಗಳ ಅವಶ್ಯಕತೆಯ ಕುರಿತು ಸಮಗ್ರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈ ಕಛೇರಿಯ ಪತ್ರದ ಸಂಖ್ಯೆ:ನಯೋ:ಉನಿ(ಕೇಂ.ಕಾ):ಇಲಾಖೆ: Restructing:08-09 ದಿನಾಂಕ:15-9-2008 ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗಿದೆ.

**2019–20**

| | | |
|---|---|---|
| **ಯೋಜನೆಯ ಹೆಸರು** | : | ಆಡಳಿತಾತ್ಮಕ ವೆಚ್ಚ, ಹೊಸ ಹುದ್ದೆಗಳ ಸೃಜನೆಗಾಗಿ, ಸಿಬ್ಬಂದಿಗಳ ವೆಚ್ಚ, ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚ. |
| **ಬಿಡುಗಡೆಯಾಗಿರುವ ಅನುದಾನ:** | | ರೂ.100.00 ಲಕ್ಷ |
| **ಲೆಕ್ಕ ಶೀರ್ಷಿಕೆ** | : | 2217–05–001–1–11–059 |

ಈ ಯೋಜನೆಯಡಿಯಲ್ಲಿ ಇಲಾಖೆಗೆ 2019–20ನೇ ಸಾಲಿಗೆ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ. ಅದರಲ್ಲಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಯವರಿಗೆ ವಿವಿಧ ತರಬೇತಿ, ಕಾರ್ಯಕ್ರಮಗಳು, ಉನ್ನತ ವ್ಯಾಸಂಗ, ಗಣಕಯಂತ್ರ ಖರೀದಿ ಹಾಗೂ ಇತರೆ ಕಾರ್ಯಗಾರಗಳಿಗೆ ನಿಯೋಜಿಸಲು ವೆಚ್ಚವನ್ನು ಭರಿಸಲಾಗುತ್ತದೆ.

| | |
|---|---|
| **ಯೋಜನೆಯ ಹೆಸರು** | : ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ – ಡಿ.ಎಂ.ಇ. |
| ಲೆಕ್ಕ ಶೀರ್ಷಿಕೆ | : 4217–60–800–4–02–386 |
| ಬಿಡುಗಡೆ ಮಾಡಿರುವ ಅನುದಾನ | : ರೂ.100.00 ಲಕ್ಷ |

ಈ ಯೋಜನೆಯಡಿಯಲ್ಲಿ ಈ ಇಲಾಖೆಗೆ 2019–20ನೇ ಸಾಲಿಗೆ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ. ಅದರಲ್ಲಿ, ಇಲಾಖೆಯ ಶಾಖಾ ಕಛೇರಿಗಳಿಗೆ ನಿವೇಶನ ಖರೀದಿ/ಕಟ್ಟಡ ನಿರ್ಮಾಣಕ್ಕಾಗಿ ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

**ಯೋಜನೆಗಳ ಗುರಿ ಮತ್ತು ಸಾಧನೆ :**

2019–20 ನೇ ಸಾಲಿನಲ್ಲಿ ಇಲಾಖೆಯ ಶಾಖಾ ಕಚೇರಿಗಳ ಕಟ್ಟಡ ನಿರ್ಮಾಣಕ್ಕಾಗಿ ರೂ. 100.00 ಗಳ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಹಾಸನ ಕಚೇರಿಯ ಕಟ್ಟಡ ನಿರ್ಮಾಣ ಮಾಡಲು ಸದರಿ ಅನುದಾನವನ್ನು ಉಪಯೋಗಿಸಿಕೊಳ್ಳುವ ಗುರಿ ಹೊಂದಲಾಗಿದೆ.

ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು ಕಚೇರಿಗೆ ಸ್ವಂತ ಕಟ್ಟಡ ಹೊಂದಲು ರೂ. 180.00 ಲಕ್ಷಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಹೊಸದಾಗಿ ನೇಮಕಾತಿ ಹೊಂದಿರುವ ಅಧಿಕಾರಿಗಳು / ಸಿಬ್ಬಂದಿಗಳ ತರಬೇತಿಯ ವಿವರ.

2018–19 ನೇ ಸಾಲಿನಲ್ಲಿ ಈ ಇಲಾಖೆಯ ಹೆಚ್ಚುವರಿ ನಿರ್ದೇಶಕರು, ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರುಗಳನ್ನು ವಿವಿಧ ಕಾರ್ಯಾಗಾರಗಳಿಗೆ ನಿಯೋಜಿಸಲಾಗಿದೆ ಹಾಗೂ ಇಲಾಖೆಯಲ್ಲಿ ಹೊಸದಾಗಿ ನೇಮಕಾತಿ ಹೊಂದಿರುವ ಸಹಾಯಕ ನಿರ್ದೇಶಕರು, ನಗರ ಯೋಜಕರು, ಸಹಾಯಕ ನಗರ ಯೋಜಕರುಗಳಿಗೆ ಅಮೃತ್ ಯೋಜನೆಯಡಿಯಲ್ಲಿ ತರಬೇತಿಗೆ ದಿ:21–06–2018 ರಿಂದ 23–06–2018, 25–06–2018 ರಿಂದ 27–06–2018, 22–10–2018 ರಿಂದ 24–10–2018 ಮತ್ತು 25–10–2018 ರಿಂದ 27–10–2018 ರವರೆಗೆ ಹಾಗೂ ದಿ:03–01–2019 ರಿಂದ 16–02–2019 ರವರೆಗೆ ವೃತ್ತಿ ಬುನಾದಿ ತರಬೇತಿಯನ್ನು ಸಹಾಯಕ ನಗರ ಯೋಜಕರುಗಳಿಗೆ ಆಯೋಜಿಸಲಾಗಿದೆ.

**2018–19 ನೇ ಸಾಲಿನಲ್ಲಿ ನೇಮಕಾತಿ ಹೊಂದಿರುವ ವಿವರ :**

2018–19 ನೇ ಸಾಲಿನಲ್ಲಿ ಈ ಕೆಳಕಂಡ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ.

| ಕ್ರ ಸಂ. | ಹುದ್ದೆಗಳ ಹೆಸರು | ಭರ್ತಿ ಮಾಡಲಾದ ಸಂಖ್ಯೆ |
|---|---|---|
| 1. | ಸಹಾಯಕ ನಗರ ಯೋಜಕರು | 08 |
| 2. | ಪ್ರಥಮ ದರ್ಜೆ ಸಹಾಯಕರು | 01 |
| 3. | ಗ್ರೂಪ್–ಡಿ | 01 |

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು

o/c

# ನಮೂನೆ – 1

## ಆರ್ಥಿಕ ಪ್ರಗತಿ

2018–19 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆಗಳಲ್ಲಿ ಒದಗಿಸಿದ ಅನುದಾನ, ಖರ್ಚಿನ ವಿವರ ಹಾಗೂ 2019–20 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನದ ವಿವರ.

**ಇಲಾಖೆ/ಸಂಸ್ಥೆ :** ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ರೂ. ಲಕ್ಷಗಳಲ್ಲಿ

| ಕ್ರ. ಸಂ. | ಲೆಕ್ಕಶೀರ್ಷಿಕೆಗಳ ವಿವರ | 2018–19 ನೇ ಸಾಲಿನ ಆರ್ಥಿಕ ಪ್ರಗತಿ | | 2019–20 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ |
|---|---|---|---|---|
| | | 2018–19 ರಲ್ಲಿ ಒದಗಿಸಿದ ಅನುದಾನ | ಮಾರ್ಚ್ 2019 ರ ಅಂತ್ಯಕ್ಕೆ ಆದ ವೆಚ್ಚ | |
| 4. | 2217–05–001–1–01 | 1892.00 | 1896.17 (–4.17) | 2223.00 |
| 5. | 4217–60–800–4–02–386 | 100.00 | 0.46 | 100.00 |
| 6. | 2217–05–001–1–11–059 | 100.00 | 28.31 | 100.00 |

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು

# ನಮೂನೆ – 2

## ಭೌತಿಕ ಪ್ರಗತಿ

2018–19 ನೇ ಸಾಲಿನಲ್ಲಿ ನಿಗದಿಪಡಿಸಿದ ಭೌತಿಕ ಗುರಿ ಹಾಗೂ ಸಾಧನೆ ಮತ್ತು 2019–20 ನೇ ಸಾಲಿನಲ್ಲಿ ನಿಗದಿಪಡಿಸಿರುವ ಗುರಿ.

| ಕ್ರ ಸಂ. | ಯೋಜನೆ | 2018–19 ನೇ ಸಾಲಿನ ಭೌತಿಕ ಪ್ರಗತಿ | | 2019–20 ನೇ ಸಾಲಿನ ಗುರಿ | ಷರಾ |
|---|---|---|---|---|---|
| | | ಗುರಿ | ಸಾಧನೆ (ಮಾರ್ಚ್ 2019ರ ಅಂತ್ಯಕ್ಕೆ) | | |
| 1. | 2217–05–001–1–11–059 | ಈ ಇಲಾಖೆಯ ಹಾಲಿ ಹಾಗೂ ಹೊಸದಾಗಿ ನೇಮಕಗೊಂಡ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ, ಕಾರ್ಯಾಗಾರ, ಉನ್ನತ ವ್ಯಾಸಂಗ, ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಖರೀದಿಸುವುದು | ವಿವಿಧ ತರಬೇತಿ ಉದ್ದೇಶಗಳಿಗೆ ಹಾಗೂ ಸೆಮಿನಾರ್‌ಗಳಿಗೆ, ಇಲಾಖೆಯ ವಿವಿಧ ಶಾಖಾ ಕಚೇರಿಗಳ ಉಪಯೋಗಕ್ಕೆ ಗಣಕಯಂತ್ರ ಮತ್ತು ಪೀಠೋಪಕರಣಗಳ ಖರೀದಿಗಾಗಿ ಹಾಗೂ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ರೂ. 28.31 ಲಕ್ಷಗಳ ವೆಚ್ಚ ಭರಿಸಲಾಗಿದೆ. | ಈ ಇಲಾಖೆಯ ಹಾಲಿ ಹಾಗೂ ಹೊಸದಾಗಿ ನೇಮಕಗೊಂಡ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ, ಕಾರ್ಯಾಗಾರ, ಉನ್ನತ ವ್ಯಾಸಂಗ, ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಖರೀದಿಸುವುದು | – |
| 2. | 4217–60–800–4–02–386 | ಈ ಇಲಾಖೆಯ ಶಾಖಾ ಕಚೇರಿಗಳ ಕಟ್ಟಡ ನಿರ್ಮಾಣ ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಖರೀದಿಸಲು ಪ್ರಸ್ತಾಪಿಸಲಾಗಿದೆ. | ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು ಇವರಿಗೆ ಹಂಚಿಕೆಯಾಗಿರುವ ನಿವೇಶನಕ್ಕೆ ಆಸ್ತಿ ತೆರಿಗೆ ಮತ್ತು ನೊಂದಣಿ ಶುಲ್ಕಕ್ಕೆ ಒಟ್ಟು ರೂ. 0.46 ಲಕ್ಷಗಳು ವೆಚ್ಚ ಭರಿಸಲಾಗಿದೆ. | ಈ ಇಲಾಖೆಯ ಶಾಖಾ ಕಚೇರಿಗಳ ಕಟ್ಟಡ ನಿರ್ಮಾಣಕ್ಕಾಗಿ ಹಾಗೂ ನಿವೇಶನ ಖರೀದಿಸಲು ಪ್ರಸ್ತಾಪಿಸಲಾಗಿದೆ. | – |

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು



o/c